# ನಗರಸಭೆ ಕಾರ್ಯಾಲಯ, ವಿಜಾಪೂರ

ಸಂಖ್ಯೆ :ನಸವಿ/12ನೇ.ಹ/ಕಾಮಗಾರಿ/ಟೆ.ಪ್ರ/ /09-10 ದಿ: 06-11-2009

## ಟೆಂಡರ ಪ್ರಕಟಣೆ

ಯಾವತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಮೂರನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ ಸನ್ 2009-10 ನೇ ಸಾಲಿನ 12 ನೇ ಹಣಕಾಸು ಯೋಜನೆಯಡಿ ರಸ್ತೆ ಮತ್ತು ಸೇತುವೆ, ಮುಕ್ತನಿಧಿಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ವಿಜಾಪೂರ ನಗರಸಭೆಯ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಅರ್ಹ ಗುತ್ತಿಗೆದಾರರಿಂದ ಆರ್ಥಿಕ ಇಲಾಖೆಯ **ಏಕರೂಪದ ಟೆಂಡರ್ ಬುಕ್‌ಲೆಟ್ KW-1** ರಲ್ಲಿ ಸೀಲಬಂದ ಮಾಡಿದ ಐಟಂವಾರು ಟೆಂಡರಗಳನ್ನು ಆಹ್ವಾನಿಸಿದ್ದು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ತಮ್ಮ ದರವಾರುಗಳನ್ನು ಈ ಕೆಳಕಾಣಿಸಿದವರಿಗೆ ನಿಗದಿತ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರಿಗೆ ತಲುಪುವಂತೆ ಸಲ್ಲಿಸಲು ತಿಳಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ.

| ಅ.ನಂ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಮ್.ಡಿ ಹಣ | ಟೆಂಡರ ಫಾರ್ಮ ಬೆಲೆ | ಗುತ್ತಿಗೆದಾರರ ದರ್ಜೆ | ಅವಧಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| **1) 12 ನೇ ಹಣಕಾಸಿನ ಮುಕ್ತ ನಿಧಿ ಅನುದಾನದ ಕಾಮಗಾರಿ (2008-09 ನೇ ಸಾಲಿನ)** | | | | | | |
| 1 | ವಿಜಾಪೂರ ನಗರದ ರೇಲ್ವೆ ಸ್ಟೇಶನ ಹತ್ತಿರ ಜೋಡಪಥ ರಸ್ತೆಗೆ ರಸ್ತೆ ಮಧ್ಯ ಜೋಡು ಬೀದಿ ದೀಪದ ಟ್ಯೂಬಲೈಟ್ ಕಂಬಗಳನ್ನು ಅಳವಡಿಸುವದು. | 7.26 | 18150-00 | 1250-00 | 3 ನೇ ದರ್ಜೆ ಮೇಲ್ಪಟ್ಟು | 45 ದಿವಸ |
| **2) 12 ನೇ ಹಣಕಾಸಿನ ಮುಕ್ತ ನಿಧಿ ಅನುದಾನದ ಕಾಮಗಾರಿ (2009-10 ನೇ ಸಾಲಿನ)** | | | | | | |
| 1 | ಗಾಂಧಿಚೌಕದಿಂದ ಶಹಾಪೂರ ಅಗಸಿಯವರೆಗೆ ಆಜಾದ ರಸ್ತೆಯನ್ನು ಅಭಿವೃದ್ಧಿ ಪಡಿಸುವುದು | 22.25 | 55625-00 | 2250-00 | 2 ನೇ ದರ್ಜೆ ಮೇಲ್ಪಟ್ಟು | 45 ದಿವಸ |
| **3) 12 ನೇ ಹಣಕಾಸಿನ ರಸ್ತೆ ಮತ್ತು ಸೇತುವೆ ನಿರ್ವಹಣೆ ಅನುದಾನದ ಕಾಮಗಾರಿ (2009-10 ನೇ ಸಾಲಿನ)** | | | | | | |
| 1 | ಬಸ್ ಸ್ಟ್ಯಾಂಡ ದಿಂದ ಜೋಡ ಗುಮ್ಮಟ ರಸ್ತೆ ಅಭಿವೃದ್ಧಿ ಪಡಿಸುವುದು | 13.00 | 32500-00 | 2250-00 | 2 ನೇ ದರ್ಜೆ ಮೇಲ್ಪಟ್ಟು | 45 ದಿವಸ |
| 2 | ಫಸರಿ ಖಮಾನ ರಸ್ತೆಯನ್ನು ಅಭಿವೃದ್ಧಿ ಪಡಿಸುವುದು | 5.00 | 12500-00 | 1250-00 | 3 ನೇ ದರ್ಜೆ ಮೇಲ್ಪಟ್ಟು | 45 ದಿವಸ |
| 3 | ಅಥಣಿ ಮುಖ್ಯರಸ್ತೆಯಿಂದ ಗೋದಾವರಿ ಹೋಟೇಲವರೆಗೆ ಸರ್ವಿಸ್ ರಸ್ತೆಯನ್ನು ನಿರ್ಮಿಸುವುದು | 13.00 | 32500-00 | 2250-00 | 2 ನೇ ದರ್ಜೆ ಮೇಲ್ಪಟ್ಟು | 45 ದಿವಸ |
| 4 | ಬಸ್ ಸ್ಟ್ಯಾಂಡದಿಂದ ಸೌಭಾಗದವರೆಗೆ (ಚರ್ಚ ರಸ್ತೆ) ಅಭಿವೃದ್ಧಿ ಪಡಿಸುವುದು | 13.00 | 32500-00 | 1250-00 | 3 ನೇ ದರ್ಜೆ ಮೇಲ್ಪಟ್ಟು | 45 ದಿವಸ |
| **4) 12 ನೇ ಹಣಕಾಸಿನ ಕಟ್ಟಡ ನಿರ್ವಹಣೆ ಅನುದಾನದ ಕಾಮಗಾರಿ (2008-09& 2009-10 ನೇ ಸಾಲಿನ)** | | | | | | |
| 1 | ನಗರ ಸಭೆ **ಕಟ್ಟಡಗಳ ನಿರ್ವಹಣೆ** | 2.25 | 5625-00 | 1250-00 | 3 ನೇ ದರ್ಜೆ ಮೇಲ್ಪಟ್ಟು | 45 ದಿವಸ |

1) ಖಾಲಿ ಟೆಂಡರ ಫಾರ್ಮಗಾಗಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 20-11-2009 ಮಧ್ಯಾಹ್ನ 5-00 ಘಂಟೆಯವರೆಗೆ
2) ಖಾಲಿ ಟೆಂಡರ ಫಾರ್ಮ ಕೊಡುವ ದಿನಾಂಕ : 20-11-2009 ಮಧ್ಯಾಹ್ನ 5-00 ಘಂಟೆಯವರೆಗೆ
3) ಭರ್ತಿ ಮಾಡಿದ ಮೊಹರಬಂದ ಟೆಂಡರಗಳನ್ನು ಸ್ವೀಕರಿಸುವ ದಿನಾಂಕ : 23-11-2009 ಮಧ್ಯಾಹ್ನ 5-00 ಘಂಟೆಯವರೆಗೆ
4) ಟೆಂಡರುಗಳನ್ನು ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯುವ ದಿನಾಂಕ : 23-11-2009 ಮಧ್ಯಾಹ್ನ 5-00 ಘಂಟೆ ನಂತರ

## : ಷರತ್ತುಗಳು :

1) ಖಾಲಿ ಟೆಂಡರ ಫಾರ್ಮಗಳನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿಯೂ ಸಹ ಪಡೆದುಕೊಳ್ಳಬಹುದು ಹಾಗೂ ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ಸಲ್ಲಿಸಲು ನಗರಸಭೆಯ ಕಾರ್ಯಾಲಯದಲ್ಲಿ ಮತ್ತು ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಟೆಂಡರ ಪೆಟ್ಟಿಗೆಯನ್ನು ಇಡಲಾಗುವದು.
2) ಅಂದಾಜು ಪತ್ರಿಕೆಯ ಮೊತ್ತಕ್ಕೆ ಕಡಿಮೆ ದರ ನಮೂದಿಸಿದ ಗುತ್ತಿಗೆದಾರರು ಅಷ್ಟೇ ಮೊತ್ತದ ಡಿ.ಡಿಯನ್ನು ಟೆಂಡರ ಫಾರ್ಮ ಜೊತೆಗೆ ಲಗತ್ತಿಸತಕ್ಕದ್ದು.
3) ಇ.ಎಂ.ಡಿ ಲಗತ್ತಿಸದೆ ಟೆಂಡರ ಫಾರ್ಮಗಳನ್ನು ಪರಿಗಣಿಸಲಾಗುವದಿಲ್ಲ.
4) ಟೆಂಡರ ಫಾರ್ಮ ಅರ್ಜಿ ಸಲ್ಲಿಸುವಾಗ ಗುತ್ತಿಗೆದಾರರು ತಮ್ಮ ಚಾಲ್ತಿ ನೊಂದಾಯಿತ ಗುತ್ತಿಗೆದಾರರ ಲೈಸನ್ಸ ಪ್ರಮಾಣ ಪತ್ರ ಹಾಗೂ ಇಂತಹದೆ ಕಾಮಗಾರಿ ನಿರ್ವಹಿಸಿದ ಬಗ್ಗೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
5) ಟೆಂಡರ ಫಾರ್ಮನಲ್ಲಿ ಐಟಂವಾರು ದರಗಳನ್ನು ಸ್ಪಷ್ಟವಾಗಿ ಅಂಕಿಯಲ್ಲಿ ಹಾಗೂ ಅಕ್ಷರಗಳಲ್ಲಿ ನಮೂದಿಸತಕ್ಕದ್ದು. ಮತ್ತು ಎಲ್ಲಾ ತಿದ್ದುಪಡಿಗಳನ್ನು ದೃಢೀಕರಿಸತಕ್ಕದ್ದು.
6) ಗುತ್ತಿಗೆದಾರರು ಸದರಿ ಕಾಮಗಾರಿಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಪ್ರಾರಂಭಿಸಿದ ನಂತರ ಹಾಗೂ ಪೂರ್ಣಗೊಂಡ ನಂತರ ಪ್ರತ್ಯೇಕವಾಗಿ ಭಾವ ಚಿತ್ರಗಳನ್ನು ತೆಗೆದು ಅದರ ಪ್ರತಿಯನ್ನು ಈ ಕಾರ್ಯಾಯಕ್ಕೆ ಕಳಸುವದು.
7) ಕಾಮಗಾರಿಗಳಿಗೆ ಉಪಯೋಗಿಸುವ ಸಾಮಗ್ರಿಗಳ ಗುಣಮಟ್ಟವನ್ನು ಜಿಲ್ಲಾಧಿಕಾರಿಗಳಿಂದ ನಿಯುಕ್ತಿ ಗೊಂಡ ಗುಣ ನಿಯಂತ್ರಣ ಸಂಸ್ಥೆಯಿಂದ ತಪಾಸಣೆ ಮಾಡಿಸಿ ದೃಢೀಕರಿಸಿಕೊಂಡ ನಂತರ ಕೆಲಸ ಪ್ರಾರಂಭಿಸತಕ್ಕದ್ದು.
8) ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಮಾನ್ಯ ಜಿಲ್ಲಾಧಿಕಾರಿಗಳಿಂದ ನಿಯೋಜನೆಗೊಂಡ 3 ನೇ ವ್ಯಕ್ತಿ ತಪಾಸಣೆ ಸಂಸ್ಥೆಯಿಂದ ಸದರಿ ಕಾಮಗಾರಿಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ಬಗ್ಗೆ ಪಡೆದ ಪ್ರಮಾಣ ಪತ್ರಗಳನ್ನು ಪಡೆದು ಪುರಸಭೆಗೆ ಸಲ್ಲಿಸಿದ ನಂತರವೆ ಬಿಲ್ಲು ಪಾವತಿಸಲಾಗುವದು.
9) ಗುತ್ತಿಗೆದಾರರು ಕಾಮಗಾರಿ ಪೂರ್ತಿಗೊಳಿಸಿದ ನಂತರ 2 ವರ್ಷದವರೆಗೆ ನಿರ್ವಹಣೆಯನ್ನು ಮಾಡಲು ಛಾಪಾ ಕಾಗದ ಮೇಲೆ ಒಪ್ಪಿಗೆ ಪತ್ರ ಬರೆದುಕೊಡಬೇಕು.
10) ಗುತ್ತಿಗೆದಾರರು ಕಾಮಗಾರಿಗಳ ಸ್ಥಳಗಳನ್ನು ಪರಿಶೀಲಿಸಿ ಟೆಂಡರ ಸಲ್ಲಿಸತಕ್ಕದ್ದು.
11) ಕಾಮಗಾರಿಯ ವಿಕ್ಷಣೆಗಾಗಿ ಮೂರನೇ ಪಕ್ಷದವರಿಂದ ಹಂತ ಹಂತವಾಗಿ ತಪಾಸಣೆ ಮಾಡಿಸಿ ಬಿಲ್ಲನ್ನು ಸಂದಾಯ ಮಾಡಲಾಗುವದು.
12) ಕಾಮಗಾರಿಯ 2 ವರ್ಷದ ನಿರ್ವಹಣೆ ಅವಧಿ ಪೂರ್ತಿಗೊಂಡ ನಂತರ ಪುನ: 3 ನೇ ಪಕ್ಷದ ತಪಾಸಣಾ ಸಂಸ್ಥೆಯವರಿಂದ ಕಾಮಗಾರಿ ಗುಣಮಟ್ಟದ ಬಗ್ಗೆ ಪರೀಶಿಲಿಸಿ ಪ್ರಮಾಣ ಪತ್ರ ಪಡೆದುಕೊಂಡ ನಂತರವೇ ಗುತ್ತಿಗೆದಾರರಿಗೆ ಮುಂಗಡ ಠೇವಣಿ ಹಾಗೂ ಭದ್ರತಾ ಠೇವಣಿ ಮತ್ತು ಶೇ. 5 ರಷ್ಟು ಮುಂಗಡ ತುಂಬಿದ ಹಣ ಸಂದಾಯ ಮಾಡಲಾಗುವದು
13) ಟೆಂಡರ ಮಂಜೂರಾದ ಬಗ್ಗೆ ತಿಳಿಸಿದ 7 ದಿವಸಗಳಲ್ಲಿ ಶೇ.5% ರಷ್ಟು ಕಾರ್ಯಾಧಾರಿತ ಭದ್ರತಾ ಠೇವಣಿ ಹಣವನ್ನು ಸ್ಥಳೀಯ ಸಂಸ್ಥೆಗೆ ಭರಣಾ ಮಾಡಿ ಒಪ್ಪಿಗೆ ಕರಾರು ಪತ್ರ ಬರೆದು ಕೊಟ್ಟು ಮೂರು ದಿನಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸತಕ್ಕದ್ದು. ಇದನ್ನು ಉಲ್ಲಂಘಿಸಿದಲ್ಲಿ ನಿಮ್ಮ ಟೆಂಡರನ್ನು ರದ್ದು ಪಡಿಸಿ ಇ.ಎಂ.ಡಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ನಂತರದ ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗುವದು.
14) ಸೂಚಿತ ಟೆಂಡರಗಳನ್ನು ಮಾನ್ಯ ಜಿಲ್ಲಾಧಿಕಾರಿಗಳಿಂದ ಮಂಜೂರಾತಿ ದೊರಕಿದ ನಂತರ ಕಾರ್ಯಾದೇಶ ನೀಡಲಾಗುವದು. ನಂತರ ಉಳಿದ ಗುತ್ತಿಗೆದಾರರ ಇ.ಎಂ.ಡಿ ಹಣವನ್ನು ಹಿಂದುರಿಗಿಸಲಾಗುವದು. ಸದರ ಹಣಕ್ಕೆ ಬಡ್ಡಿ ಇರುವದಿಲ್ಲ.
15) ಕಾಮಗಾರಿ ಪ್ರಾರಂಭಿಸುವ ಪೂರ್ವದಲ್ಲಿ ಕಾಮಗಾರಿ ಸ್ಥಳದ ಹತ್ತಿರ ಖಾಯಂ ಆಗಿ ಉಳಿಯುವಂತಹ ನಾಮ ಫಲಕವನ್ನು ಗುತ್ತಿಗೆದಾರರು ತಮ್ಮ ಸ್ವಂತ ವೆಚ್ಚದಿಂದ ಅಳವಡಿಸಿತಕ್ಕದ್ದು (ಕಾಮಗಾರಿ ಹೆಸರು, ಅಂದಾಜು ಮೊತ್ತ, ಕಾಮಗಾರಿ ಮುಗಿಸುವ ಅವಧಿ ಹಾಗೂ ಗುತ್ತಿಗೆದಾರರ ಹೆಸರು ನಾಮಫಲಕದಲ್ಲಿ ಕಡ್ಡಾಯವಾಗಿ ಬರೆಸತಕ್ಕದು).
16) ಗುತ್ತಿಗೆದಾರರು ಟೆಂಡರಿನಲ್ಲಿಟ್ಟ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸದೆ ಇದ್ದಲ್ಲಿ ಯಾವುದೇ ನೋಟಿಸನ್ನು ನೀಡದೇ ತಮ್ಮ ಟೆಂಡರನ್ನು ರದ್ದುಗೊಳಿಸಿ ನಂತರದ ಅತೀ ಕಡಿಮೆ ದರ ಇದ್ದ ಗುತ್ತಿಗೆದಾರರಿಂದ ಕೆಲಸ ಮಾಡಿಸಲು ಕ್ರಮ ಜರುಗಿಸಲಾಗುವದು ಹಾಗೂ ಹೆಚ್ಚಿಗೆ ಬೀಳುವ ಮೊತ್ತವನ್ನು ತಮ್ಮಿಂದ ವಸೂಲಿ ಮಾಡಲಾಗುವದು.
17) ಮೇಲ್ಕಂಡ ಕಾಮಗಾರಿಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಪ್ಯಾಕೇಜದಲ್ಲಿ ಕಾಮಗಾರಿಗಳ ವಿವರಗಳಿಗಾಗಿ ಈ ಕಾರ್ಯಾಲಯದ ಅಭಿಯಂತರನ್ನು ಕಛೇರಿ ಅವಧಿಯಲ್ಲಿ ಪಡೆಯಬಹುದು.
18) ಮೇಲೆ ಪ್ರಕಟಿಸಿದ ದಿನಾಂಕಗಳಲ್ಲಿ ಯಾವುದಾದರೂ ದಿನಗಳು ಸಾರ್ವಜನಿಕ ರಜೆ ಎಂದು ಘೋಷಣೆಯಾದಲ್ಲಿ ಅದರ ಮುಂದಿನ ದಿನವನ್ನು ಪರಿಗಣಿಸಲಾಗುವದು.
19) ಆಯ್ಕೆಗೊಂಡ ಗುತ್ತಿಗೆದಾರರು ಆಯಾ ಕಾಮಗಾರಿಗಳ ಅಂದಾಜು ಮೊತ್ತದ ಶೇ.5 ರಷ್ಟು ಮೊತ್ತವನ್ನು ಫರ ಫಾರ್ಮನ್ಸ ಸೆಕ್ಯೂರಿಟಿ ರೂಪದಲ್ಲಿ ತಮಗೆ ಸೂಚಿಸಿದ ಏಳು ದಿನಗಳಲ್ಲಿ ಪುರಸಭೆಗೆ ಡಿ.ಡಿ ಮೂಲಕ ಭರಣಾ ಮಾಡಿ ಕಾರ್ಯಾದೇಶ ಪಡೆಯತಕ್ಕದ್ದು.
20) ಗುತ್ತಿಗೆದಾರರು ನಿಗದಿ ಪಡಿಸಿದ ಅವಧಿಯಲ್ಲಿ ಕಾಮಗಾರಿ ಪೂರ್ಣ ಗೊಳಿಸಲು ವಿಫಲರಾಗಲ್ಲಿ ನಿಯಮಗಳಂತೆ ದಂಡವನ್ನು ಕಡ್ಡಾಯವಾಗಿ ವಿಧಿಸಲಾಗುವದು.
21) ಕಾಮಗಾರಿ ಅಂದಾಜು ಮೊತ್ತದ 1% ರಷ್ಟು ಕಾರ್ಮಿಕ ಕಲ್ಯಾಣ ನಿಧಿಯನ್ನು ಬಿಲ್ಲಿನಲ್ಲಿ ಕಡಿತಗೊಳಿಸಲಾಗುವದು.
22) ನಗರಸಭೆಯಿಂದ ಕಾಲಕಾಲಕ್ಕೆ ವಿಧಿಸುವ ಕರಾರುಗಳಿಗೆ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.
   ಹೆಚ್ಚಿನ ಮಾಹಿತಿಗಾಗಿ **WWW. bijapurcity.gov.in** ವೆಬ್ ಸೈಟಿನಲ್ಲಿ ನೋಡಬಹುದು.
23) ಸ್ವೀಕೃತವಾದ ಟೆಂಡರ್‌ಗಳನ್ನು ಮಂಜುರು ಮತ್ತು ತಿರಸ್ಕರಿಸುವ ಪೂರ್ಣ ಅಧಿಕಾರ ನಗರಸಭೆಯು ಹೊಂದಿರುತ್ತದೆ.

**ಪೌರಾಯುಕ್ತರು**
**ನಗರಸಭೆ ವಿಜಾಪೂರ**

**ಅಧ್ಯಕ್ಷರು**
**ನಗರಸಭೆ ವಿಜಾಪೂರ**